# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Ref**:7/2024

ಎಂ.ಡಬ್ಲ್ಯೂ-1

**<u>ದಿನಾಂಕ 10.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಮುಂದುವರೆದ ಪಾಟೀ ಸವಾಲುಃ 1 ನೇ ಪಕ್ಷಗಾರರ ಪರ ಶ್ರೀ.ಎಲ್.ಎಂ.ಪಿ. ವಕೀಲರಿಂದಃ**

ನಮ್ಮ ಒಡಂಬಡಿಕೆಯಲ್ಲಿ ಪ್ರತಿ ಕಾರ್ಮಿಕರಿಂದ ರೂ.1,000/- ಹಣವನ್ನು ಕಟಾವು ಮಾಡುವುದಾಗಿ ತಿಳಿಸಿದ್ದು ಅದನ್ನು ಯಾವ ಉದ್ದೇಶಕ್ಕಾಗಿ ಮಾಡಿದ್ದರು ಎಂಬುದನ್ನು ಹೇಳಬಹುದೆ ಎಂದರೆ ನನಗೆ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಸದರಿ ಒಡಂಬಡಿಕೆಯನ್ನು ಕೈಗಾರಿಕ ಕಾಯ್ದೆ ಕಲಂ 18(3) ರ ಅಡಿಯಲ್ಲಿ ಮಾಡಿರುವುದಾಗಿರುತ್ತದೆ ಎಂದರೆ ಸರಿ. ಕಲಂ 12(3) ಹಾಗೂ 18(3) ರ ಅಡಿಯಲ್ಲಿ ಮಾಡಿಕೊಂಡಿರುವ ಒಡಂಬಡಿಕೆಯು ಒಂದು ಮಾಲೀಕರು ಹಾಗೂ ಅವರ ಕಾರ್ಮಿಕರ ನಡುವೆ ಮಾಡಬೇಕಾಗಿದ್ದ ಒಡಂಬಡಿಕೆ ಎಂದರೆ ಸರಿ.

2 ನೇ ಪಕ್ಷಗಾರರ ಸಂಖ್ಯೆ-2 ರವರು 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯನ್ನು ಮುಂದುವರೆಸಿಕೊಂಡಿರುವ ಕಾರಣ ಕಾರ್ಮಿಕ ಸಂಘದವರ ಜೊತೆ ಒಡಂಬಡಿಕೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಒಂದು ವೇಳೆ ತಾವು ಮಾಲೀಕರಾಗಿಲ್ಲದೇ ಇರುವಾಗ ಕೈಗಾರಿಕ ಕಾಯ್ದೆ ಕಲಂ 18(3) ರಲ್ಲಿ ಅಡಿಯಲ್ಲಿ ಒಡಂಬಡಿಕೆಯನ್ನು ಮಾಡಬೇಕಾದ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿ ಸರ್ಕಾರ ಮತ್ತು ರಾಜಕೀಯದವರಿಂದ ಹಳುಬರಿಗೆ ಅವಕಾಶ ಕೊಡಿ ಎಂಬ ಒತ್ತಡ ಬಂದ ಕಾರಣ ಸದರಿ ಒಡಂಬಡಿಕೆ ಮಾಡಿಕೊಂಡಿರುತ್ತೇವೆ ಎನ್ನುತ್ತಾರೆ.

ಸದರಿ ವಿಚಾರವನ್ನು ಸದರಿ ಒಡಂಬಡಿಕೆಯಲ್ಲಿ ನಮೂದು ಮಾಡಲು ನಮಗೆ ತೊಂದರೆ ಇರಲ್ಲಿಲ್ಲ ಎಂದರೆ ನಮಗೆ ಗೊತ್ತಿಲ್ಲ ಎನ್ನುತ್ತಾರೆ. ನಿ.ಎಂ.3 ರ ದಾಖಲೆಯಲ್ಲಿ ನಮೂದಿಸಿರುವ ಕಾರ್ಮಿಕ ಸಂಘದ ಪರವಾಗಿ ಪ್ರತಿನಿಧಿಸುವ ಕ್ರಮ ಸಂಖ್ಯೆ- 2, 3, 5, 6, 7 ಮತ್ತು 8

ರವರುಗಳೆಲ್ಲಾ 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಆಗಿದ್ದರು ಎನ್ನುವುದರ ಬಗ್ಗೆ ನನಗೆ ಅರಿವು ಇರುತ್ತದೆ. ಸದರಿ 565 ಜನ ಕಾರ್ಮಿಕರ ಪಟ್ಟಿಯಲ್ಲಿ ಮೇಲೆ ತಿಳಿಸಿರುವ 6 ಜನ ಕಾರ್ಮಿಕ ಪ್ರತಿನಿಧಿಗಳ ಹೆಸರುಗಳು ಇರಲಿಲ್ಲ. ಅದೇ ರೀತಿಯಾಗಿ 565 ಜನ ಕಾರ್ಮಿಕರ ಪಟ್ಟಿಯಲ್ಲಿ ಈ ಹಿಂದೆ ಇದ್ದ ಕಾರ್ಮಿಕ ಪ್ರತಿನಿಧಿಗಳ ಹೆಸರುಗಳನ್ನು ಸೇರಿಸಿರಲ್ಲಿಲ್ಲ ಎಂದರೆ ಅದರ ಬಗ್ಗೆ ನನಗೆ ಅರಿವು ಇಲ್ಲ.

565 ಕಾರ್ಮಿಕರು ಹಾಗೂ 80 ಸಾವಿರ ಪರಿಹಾರ ಕೊಡುವುದಾಗಿ ತೀರ್ಮಾನ ಆಗಿರುವುದನ್ನು ಕಾರ್ಮಿಕ ಸಂಘದವರು ಕಾರ್ಮಿಕರ ಒಪ್ಪಿಗೆ ಮೇರೆಗೆ ಮಾಡಲಾಗಿತ್ತು ಎನ್ನುವುದರ ಬಗ್ಗೆ ನಿಮಗೆ ಅರಿವು ಇತ್ತೇ ಎಂದರೆ ನನಗೆ ಅರಿವು ಇಲ್ಲ ಎನ್ನುತ್ತಾರೆ. ದಿನಾಂಕಃ 19.11.2020 ರಲ್ಲಿ ಕಾರ್ಮಿಕರು ಹಂತ ಹಂತವಾಗಿ ಸೇರಿಕೊಳ್ಳಬೇಕು ಎನ್ನುವುದರ ಬಗ್ಗೆ ತಿಳುವಳಿಕೆ ಪತ್ರವನ್ನು ನೋಟೀಸ್ ಬೋರ್ಡ್ ನಲ್ಲಿ ಪ್ರಕಟಣೆ ಮಾಡಿದ್ದರು.

565 ಜನ ಕಾರ್ಮಿಕರ ಪಟ್ಟಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಲು ತೊಂದರೆ ಇರಲಿಲ್ಲ ಎಂದರೆ ಅದರ ಅವಶ್ಯಕತೆ ಇರಲಿಲ್ಲ ಎನ್ನುತ್ತಾರೆ. ಪ್ರತಿಯೊಂದು ಕಾರ್ಮಿಕರ ಜೊತೆ full and final settlement ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ liquidator ರವರು ನಿಮಗೆ ಸೂಚಿಸಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸಿ ದಿನಾಂಕಃ 11.11.2020 ರ ಒಡಂಬಡಿಕೆಯ ಪ್ರಕಾರ ರೂ.80,000/- ಪರಿಹಾರ ಹಾಗೂ gratuity ನಲ್ಲಿ ನಮೂದು ಮಾಡಿದ್ದರು ಎನ್ನುತ್ತಾರೆ. Gratuity ಹಣವನ್ನು 2 ನೇ ಪಕ್ಷಗಾರರ ಸಂಖ್ಯೆ-2 ರವರೇ ಪಾವತಿ ಮಾಡಬೇಕು ಎಂದು liquidator ರವರು ಸೂಚಿಸಿದ್ದರು ಎಂದರೆ ಸಾಕ್ಷಿ liquidator ರವರು ನೀವು ಕೊಡುವ ಹಣದಲ್ಲಿ gratuity ಹಣವನ್ನು ಪಾವತಿ ಮಾಡಬೇಕು ಎಂದು ತಿಳಿಸಿದ್ದರು ಎನ್ನುತ್ತಾರೆ.

Liquidator ರವರು gratuity ಹಣವನ್ನು ಕೂಡ ನಾವೇ ಪಾವತಿ ಮಾಡಬೇಕು ಎಂದು ಆದೇಶ ಮಾಡಿದ್ದರು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. Liquidator ರವರು 2 ನೇ ಪಕ್ಷಗಾರರ ಸಂಖ್ಯೆ-2 ರವರಿಂದ liquidation ಮೊತ್ತ ಎಷ್ಟು ಪಾವತಿ ಮಾಡಬೇಕು ಎಂದು ಆದೇಶಿಸಿರುವ ಬಗ್ಗೆ ತಮಗೆ ಅರಿವು ಇದೇಯಾ ಎಂದರೆ ಗೊತ್ತಿಲ್ಲ.

ಸದರಿ ಆದೇಶದಲ್ಲಿ liquidator ರವರು 2 ನೇ ಪಕ್ಷಗಾರರ ಸಂಖ್ಯೆ-1 ರವರು ಕಾರ್ಮಿಕರಿಗೆ ಸೇರಬೇಕಾಗಿರುವ ಬಾಕಿ ಹಣ ಎಷ್ಟು ಹಣ liquidator ಗೆ ಪಾವತಿ ಮಾಡಬೇಕು ಎಂದು ಆದೇಶ ಆಗಿತ್ತು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಯಾವುದಾದರು ಒಂದು ಸಂಸ್ಥೆ ಸಂಪೂರ್ಣವಾಗಿ ವಿಸರ್ಜನೆ ಆದರೆ ಯಾರು ಯಾರಿಗೆ ಎಷ್ಟು ಹಣ ಕೊಡಬೇಕು ಎಂಬುದನ್ನು liquidator ರವರೇ ತೀರ್ಮಾನ ಮಾಡಿ ವಿತರಣೆ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿ.ಎಂ.4 ರ ದಾಖಲೆಯ ಪ್ರಕಾರ ಪಾವತಿ ಆಗಿರುವ Honorary Exgratia ಕೈಗಾರಿಕ ಕಾಯ್ದೆ ಅಡಿಯಲ್ಲಿ ಬರುವ Retrenchment compensation ಅಲ್ಲ ಎಂದರೆ ಸರಿ.

ಇದನ್ನು ಹೊರತು ಪಡಿಸಿ Retrenchment compensation ಅಡಿಯಲ್ಲಿ ಕಾರ್ಮಿಕರಿಗೆ ಯಾವುದೇ ಹಣ ಪಾವತಿ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. 565 ಜನ ಕಾರ್ಮಿಕರಿಗೆ ಜೇಷ್ಠತೆ ಆಧಾರದ ಮೇಲೆ ಅವರುಗಳನ್ನು ಕೆಲಸಕ್ಕೆ ಸೇರಿಸಿಕೊಂಡಿಲ್ಲ ಎಂದರೆ ಸಾಕ್ಷಿ ಇರಬಹುದು ಆದರೆ ದಿನಾಂಕಃ11.11.2020 ರ ಒಡಂಬಡಿಕೆ ಪ್ರಕಾರ on solo discretion of management ಆಧಾರದ ಮೇಲೆ ತೆಗೆದುಕೊಂಡಿರುತ್ತೇವೆ ಎನ್ನುತ್ತಾರೆ.

ನಿ.ಎಂ.4 ರ ದಾಖಲೆಯಲ್ಲಿ 1 ನೇ ಪಕ್ಷಗಾರರ ಸಹಿಗಳನ್ನು ಪಡೆದುಕೊಳ್ಳದೆ ಕೇವಲ ಕೊನೆಯ ಪುಟ ಸಂಖ್ಯೆ-6 ರಲ್ಲಿ ಮಾತ್ರ ಅವರ ಸಹಿ ಪಡೆದುಕೊಂಡಿರುತ್ತೇವೆ ಎಂದರೆ ಸರಿ. ನಿ.ಎಂ.4 ರ ದಾಖಲೆಯ ಪುಟ ಸಂಖ್ಯೆ-1 ರಿಂದ 5 ರಲ್ಲಿ ಏನು ಬರೆದಿರುತ್ತದೆ ಎನ್ನುವುದರ ಬಗ್ಗೆ

1 ನೇ ಪಕ್ಷಗಾರಿಗೆ ಮಾಹಿತಿ ಇಲ್ಲ ಎಂದರೆ ಅವರಿಗೆ ಗೊತ್ತಿರಬಹುದು ಎನ್ನುತ್ತಾರೆ. ಸದರಿ ದಾಖಲೆಗೆ ಯಾರು ಸಾಕ್ಷಿದಾರರು ಸಹಿ ಮಾಡಿಲ್ಲ ಎಂದರೆ ಹೌದು.

2 ನೇ ಪಕ್ಷಗಾರರ ಸಂಖ್ಯೆ-2 ರವರು ಕಂಪನಿಯನ್ನು ಮುಂದೆ ನಡೆಸಿಕೊಂಡು ಹೋಗುವ ಸಂದರ್ಭದಲ್ಲಿ ಕೆಲಸ ಕಳೆದುಕೊಂಡಿರುವ ಕಾರ್ಮಿಕರಿಂದ ಹೊರಾಟಗಳು ಆಗಿತ್ತು ಎನ್ನುವುದರ ಬಗ್ಗೆ ನನಗೆ ಅರಿವು ಇರುತ್ತದೆ. ಸದರಿ ಹೊರಾಟದಲ್ಲಿ ಸರ್ಕಾರ ಮಧ್ಯಪ್ರವೇಶ ಮಾಡಲು ಪ್ರಯತ್ನ ಮಾಡಿತ್ತು ಎಂದರೆ ನನಗೆ ಗೊತ್ತಿಲ್ಲ. 2 ನೇ ಪಕ್ಷಗಾರರ ಸಂಖ್ಯೆ-2 ರವರು brand ಹೆಸರಿನಲ್ಲಿ ಯಾವುದೇ ಬಟ್ಟೆಗಳು ಮಾರುಕಟ್ಟೆಗೆ ಬರುತ್ತಿಲ್ಲ ಎಂದರೆ ಸಾಕ್ಷಿ Krihann Texchem brand ಹೆಸರು Reid and Taylor ಆಗಿರುತ್ತದೆ ಎನ್ನುತ್ತಾರೆ. 2 ನೇ ಪಕ್ಷಗಾರರ ಸಂಖ್ಯೆ-1 ರವರ ಸಂಸ್ಥೆ ಅಸ್ತಿತ್ವದಲ್ಲಿ ಇದ್ದಾಗಲೂ ಸಹಾ ಬಟ್ಟೆಗಳು ತಯಾರಾಗುತ್ತಿದ್ದುದು Reid and Taylor ರವರ ಹೆಸರಿನಲ್ಲಿ ಎಂದರೆ ಸರಿ.

2 ನೇ ಪಕ್ಷಗಾರರ ಸಂಖ್ಯೆ-1 ರವರು ಸಂಸ್ಥೆಯನ್ನು ನಡೆಸುತ್ತಿರುವ ಸಂದರ್ಭದಲ್ಲಿ ನಾವು ಕೈಗಾರಿಕ ನಿಯಮಗಳನ್ನು ಪಾಲನೆ ಮಾಡದೆ ಕಾರ್ಮಿಕರನ್ನು ನೇಮಕ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. 1 ನೇ ಪಕ್ಷಗಾರರ ಸಂಖ್ಯೆ-1 ರಿಂದ 13 ಕಾರ್ಮಿಕರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಲು ಸಿದ್ದರಿರುತ್ತೀರ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸಿರುತ್ತಾರೆ. ವ್ಯಾಜ್ಯ ಮಾಡಿರುವ ಕಾರಣ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಲು ಆಗುವುದಿಲ್ಲ ಎಂದು ಹೇಳುತ್ತಿದ್ದೀರ ಎಂದರೆ 565 ಜನ ಕಾರ್ಮಿಕರನ್ನು ಮಾತ್ರ ನಾವು ಕೆಲಸಕ್ಕೆ ತೆಗೆದುಕೊಂಡು ಅದರ ಮೇಲೆ ನಾವು ಯಾರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ ಎನ್ನುತ್ತಾರೆ.

ದಿನಾಂಕಃ19.11.2020 ರಲ್ಲಿ ಕಾರ್ಖಾನೆ ಪುನಃ ಪ್ರಾರಂಭ ಮಾಡುವ ಘೋಷಣೆ ಮತ್ತು ಕಾರ್ಮಿಕರ ಪಟ್ಟಿಯನ್ನು ಹಾಕಿರುವಾಗ 565 ಜನ ಕಾರ್ಮಿಕರ ಹೆಸರುಗಳನ್ನು ಅದರಲ್ಲಿ ಪ್ರಕಟಿಸಿರಲಿಲ್ಲ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿ ಹಂತ ಹಂತವಾಗಿ ನಾವು ಪ್ರಕಟಣೆ

ಮಾಡಿದ್ದೇವು ಎನ್ನುತ್ತಾರೆ. ಮೊದಲನೇ ಬಾರಿ ಪ್ರಕಟಣೆ ಮಾಡಿದಾಗ ಎಷ್ಟು ಕಾರ್ಮಿಕರನ್ನು ತೆಗೆದುಕೊಳ್ಳಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಯಾವ ಯಾವ ಹಂತದಲ್ಲಿ ಎಷ್ಟು ಕಾರ್ಮಿಕರನ್ನು ತೆಗೆದುಕೊಂಡಿದ್ದೇವು ಎನ್ನುವುದರ ಬಗ್ಗೆ ನನಗೆ ಅರಿವು ಇಲ್ಲ. ಮುಂದಿನ ದಿನಗಳಲ್ಲಿ 2 ನೇ ಪಕ್ಷಗಾರರು ಉತ್ಪಾದನೆ ಮತ್ತು ವ್ಯಾಪಾರ ಹೆಚ್ಚಾದ್ದರೆ ಅದರಲೂ ಸಹಾ 1 ನೇ ಪಕ್ಷಗಾರರನ್ನು ಕೆಲಸಕ್ಕೆ ತೆಗೆದುಕೊಳ್ಳಲು ನಮಗೆ ಯಾವುದೇ ತೊಂದರೆ ಇಲ್ಲ ಎಂದರೆ ಈಗ ಆ ಬಗ್ಗೆ ನನಗೆ ಏನು ಹೇಳಲು ಆಗುವುದಿಲ್ಲ ಎನ್ನುತ್ತಾರೆ.

ಈಗ ನಮ್ಮ ಕಾರ್ಖಾನೆಯಲ್ಲಿ ಸುಮಾರು 540 ಜನ ಕಾರ್ಮಿಕರು ಕೆಲಸ ಮಾಡುತ್ತಿರುತ್ತಾರೆ. ಈಗಿನ ಪರಿಸ್ಥಿತಿಯಲ್ಲಿ ನಮ್ಮ ಕಾರ್ಖಾನೆಯಲ್ಲಿ ಕಾರ್ಮಿಕರನ್ನು ನೇಮಿಸಿಕೊಳ್ಳಲು ನಮಗೆ ಯಾವುದೇ ತೊಂದರೆ ಇಲ್ಲ ಎಂದರೆ ಅದರ ಅವಶ್ಯಕತೆ ಇಲ್ಲ ಎನ್ನುತ್ತಾರೆ. 2021 ನೇ ಇಸವಿಯಲ್ಲಿ ನಮ್ಮ ಸಂಸ್ಥೆಯಲ್ಲಿ ಏನು ಉತ್ಪಾದನೆಯಾಗಿದ್ದವೋ ಅದಕಿಂತ ಇವತ್ತಿನ ಸಂದರ್ಭದಲ್ಲಿ ಕಾರ್ಖಾನೆ ಉತ್ಪಾದನೆ ಹಾಗೂ ವ್ಯಾಪಾರ ಹೆಚ್ಚಾಗಿರುತ್ತದೆ ಎಂದರೆ ಹೌದು.

ದುರುದ್ದೇಶದಿಂದ ನಮ್ಮ ಸಂಸ್ಥೆಯವರು 1 ನೇ ಪಕ್ಷಗಾರರನ್ನು ಕೆಲಸಕ್ಕೆ ತೆಗೆದುಕೊಳ್ಳದೆ ಅವರಿಗೆ ಮೋಸ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಈ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

540 ಜನ ಕಾರ್ಮಿಕರಲ್ಲದೇ ಹಲವಾರು ಜನರನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡಿರುತ್ತೇವೆ ಎಂದರೆ ಹೌದು. ಆ ರೀತಿ ಗುತ್ತಿಗೆ ಆಧಾರದ ಮೇಲೆ ಎಷ್ಟು ಜನ ಕಾರ್ಮಿಕರನ್ನು ತೆಗೆದುಕೊಂಡಿರುತ್ತೀರ ಎಂದರೆ ನೋಡಿ ಹೇಳಬೇಕು ಎನ್ನುತ್ತಾರೆ. ಕಾರ್ಖಾನೆಯ ಉತ್ಪಾದನೆಯ ಘಟಕದಲ್ಲಿ ಸುಮಾರು 50 ರಿಂದ 60 ಜನ ಕಾರ್ಮಿಕರು ಉತ್ಪಾದನೆ ಘಟಕದಲ್ಲಿ ನೇಮಿಸಿಕೊಂಡಿರುತ್ತೇವೆ. ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಕಾರ್ಮಿಕರಲ್ಲಿ

ಹಲವಾರು discharge ಆಗಿರುವ ಕಾರ್ಮಿಕರು ಎನ್ನುವುದರ ಬಗ್ಗೆ ನನಗೆ ಅರಿವು ಇರುತ್ತದೆ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**